**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.121/2021**

ಪ್ರಾ.ಸಾ. 28

ಚಾ.ಸಾ. 32

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 24.11.2025**

| | |
|---|---|
| ಸಾಕ್ಷಿದಾರರ ಹೆಸರು | ಹನುಮಂತು |
| ತಂದೆಯ ಹೆಸರು | ಸಿದ್ದೇಗೌಡ |
| ವಯಸ್ಸು | 35 ವರ್ಷ |
| ಉದ್ಯೋಗ | ಸಹಾಯಕ ಇಂಜೀನಿಯರ್, ಲೊಕೋಪಯೋಗಿ ಇಲಾಖೆ, ಮದ್ದೂರು ಉಪ ವಿಭಾಗ |
| ವಾಸ | ಅಂಚೆದೊಡ್ಡಿ ಗ್ರಾಮ, ಮಳವಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

1. ನಾನು 2017 ರಿಂದ ಇಲ್ಲಿಯವರೆಗೆ ಲೊಕೋಪಯೋಗಿ ಇಲಾಖೆ, ಮದ್ದೂರು ಉಪ ವಿಭಾಗದಲ್ಲಿ ಸಹಾಯಕ ಇಂಜೀನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 24.05.2021 ರಂದು ಮದ್ದೂರು ಪೊಲೀಸರು ಒಂದು ಮನವಿ ನೀಡಿ ಗೆಜ್ಜಲಗೆರೆ ಮುಖ್ಯ ರಸ್ತೆ ಬಳಿಯ ಒಂದು ಕಚ್ಚಾ ನಕ್ಷೆಯನ್ನು ತಯಾರಿಸಿಕೊಡುವಂತೆ ಕೇಳಿಕೊಂಡರು. ಸದರಿ ಮನವಿಯನ್ನು ಸ್ವೀಕರಿಸಿ ನಮ್ಮ ಎ ಇ ಇ ರವರು ಸದರಿ ಪತ್ರಕ್ಕೆ ಕ್ರಮ ವಹಿಸುವಂತೆ ನಿರ್ದೇಶಿಸಿದರು. ಅದರಂತೆ ನಾನು ಸ್ಥಳ ತೋರಿಸಲು ಪೊಲೀಸರ ಸಹಾಯ ಕೋರಿದ್ದು, ಅವರು ಪುರುಷೋತ್ತಮ್.ಹೆಚ್.ಎಂ. ಪಿಸಿ 605 ರವರನ್ನು ನಿಯೋಜಿಸಿ ಕಳುಹಿಸಿದ್ದರು. ಅದರಂತೆ ದಿನಾಂಕ 16.07.2021 ರಂದು ಪುರುಷೋತ್ತಮ್.ಹೆಚ್.ಎಂ.

ಪಿಸಿ 605 ರವರ ಜೊತೆ ನಾನು ಗೆಜ್ಜಲಗೆರೆಯ ರಾಷ್ಟ್ರೀಯ ಹೆದ್ದಾರಿ ಒಂದು ಸೇತುವೆಯ ಬಳಿ ಹೋದೆ. ಅಲ್ಲಿ ಸದರಿ ಪುರುಷೋತ್ತಮ್.ಹೆಚ್.ಎಂ. ಪಿಸಿ 605 ರವರು ತೋರಿಸಿದ ಸ್ಥಳದಲ್ಲಿ ಪರಿಶೀಲಿಸಿ ಅಳತೆ ಮಾಡಿ, ಕಚ್ಚಾ ನಕ್ಷೆ ತಯಾರಿಸಿದೆ. ಬಳಿಕ ಕಛೇರಿಗೆ ಬಂದು ಮಾದರಿ ನಕ್ಷೆ ತಯಾರಿಸಿ, ನಮ್ಮ ಸಹಾಯಕ ಕಾರ್ಯಪಾಲಕ ಇಂಜೀನಿಯರ್ ರವರ ಮೂಲಕ ಅವರ ಕವಚ ಪತ್ರದ ಜೊತೆ ಪೊಲೀಸರಿಗೆ ನೀಡಿದ್ದೇನೆ. ಸಾಕ್ಷಿ ದಿನಾಂಕ 24.05.2021ರ ಪೊಲೀಸರ ಮನವಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.97 ಎಂದು ಗುರುತಿಸಲಾಯಿತು. ಸಾಕ್ಷಿ ಕವಚ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.98 ಎಂದು ಗುರುತಿಸಲಾಯಿತು. ಸಾಕ್ಷಿ ಕಚ್ಚಾ ನಕ್ಷೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.99 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.99 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಆರ್ ವಿ ವಕೀಲರಿಂದಃ**

1. ಪೊಲೀಸರಿಂದ ಮನವಿ ದಿನಾಂಕ 24.05.2021 ರಂದೇ ಬಂದಿತ್ತು. ನಮ್ಮ ಕಛೇರಿಯಲ್ಲಿ ಆ ಕಾಲಕ್ಕೆ ಮೂರು ಜನ ಸಹಾಯಕ ಅಭಿಯಂತರರು ಇದ್ದೆವು. ನನಗೆ ಸದರಿ ಸ್ಥಳಕ್ಕೆ ಹೋಗಿ ನಕ್ಷೆ ತಯಾರಿಸಲು ಲಿಖಿತ ಆದೇಶ ನೀಡಿಲ್ಲ. ಸ್ಥಳಕ್ಕೆ ಮಧ್ಯಾಹ್ನ 12.00 ಗಂಟೆಗೆ ಹೋಗಿದ್ದೇನೆ. ಪುರಷೋತ್ತಮರವರನ್ನು ಬಿಟ್ಟು ಸ್ಥಳ ತೋರಿಸಲು ಬೇರೆ ಸಾಕ್ಷಿಗಳು ಬಂದಿರಲಿಲ್ಲ. ಕಚ್ಚಾ ನಕ್ಷೆಯನ್ನು ಅಂತಿಮ ನಕ್ಷೆಯ ಜೊತೆ ನಮ್ಮ ಎ ಇ ಇ ರವರಿಗೆ ಕಳುಹಿಸಿಲ್ಲ. ಕಚ್ಚಾ ನಕ್ಷೆಯನ್ನು ನನ್ನ ಡೈರಿಯಲ್ಲಿ ಮಾಡಿದ್ದೇನೆ. ನಕಾಶೆ ತಯಾರಿಸುವ ಬಾಬ್ತು ಯಾವುದೇ ಕರ್ತವ್ಯವನ್ನು ನನಗೆ ವಹಿಸಿದಾಗ ಆ ಬಾಬ್ತು ಒಂದು ಕಡತ ತಯಾರಿಸಿ ಅದಕ್ಕೆ ಕಡತ ಸಂಖ್ಯೆ ನೀಡಬೇಕು ಎಂದರೆ ಸರಿ. ಸದರಿ ಕಡತದಲ್ಲಿ ಕಚ್ಚಾ ನಕ್ಷೆ, ಮೂಲ ನಕ್ಷೆಯ ಒಂದು ಪ್ರತಿ ಇರಬೇಕು ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ನೀಡಿದ ನಕ್ಷೆಯಲ್ಲಿ ಸದರಿ ಕಡತ ಸಂಖ್ಯೆ ನಮೂದು ಇಲ್ಲ ಎಂದರೆ ಸರಿ. ನಕ್ಷೆಯಲ್ಲಿ ಕೃತ್ಯ ನಡೆದ ಸ್ಥಳ ಎಂದು ತೋರಿಸಿದ ಜಾಗದಿಂದ ಪಶ್ಚಿಮದ ಕಡೆ ಎಂದರೆ ಅದು ಮಂಡ್ಯದ ಕಡೆ. ಸದರಿ ಕೃತ್ಯ ಸ್ಥಳದಿಂದ ಕೆ ಎಂ ಎಫ್ ಎಷ್ಟು ದೂರ ಎಂದು ನಮೂದಿಸಿಲ್ಲ. ಕೃತ್ಯ ಸ್ಥಳದಿಂದ ಪಶ್ಚಿಮದ ಕಡೆಗೆ ಎಷ್ಟು ದೂರ ಸ್ಥಳ ಪರಿಶೀಲಿಸಿದ್ದೇನೆಂದು ನಮೂದು ಮಾಡಿಲ್ಲ. ಕೃತ್ಯ ಸ್ಥಳ ಎಂದು ತೋರಿಸಿದ ಜಾಗದ ಆಸುಪಾಸು ನಾನು ನೀರು ಹರಿಯುವ ಹಳ್ಳ ಗಮನಿಸಿಲ್ಲ. ಆ ಸ್ಥಳದ ಆಸುಪಾಸು ಮನೆ ಅಥವಾ ಅಂಗಡಿ, ಮುಂಗಟ್ಟು ಕಂಡು ಬಂದಿಲ್ಲ. ಆ ಸ್ಥಳದ ಆಸು ಪಾಸು ನಾನು ಬೀದಿ ದೀಪ ಗಮನಿಸಿಲ್ಲ. ನಾನು ಕೃತ್ಯ

ಸ್ಥಳಕ್ಕೆ ಮದ್ದೂರು ಕಡೆಯಿಂದ ಬರುವಾಗ ಗೆಜ್ಜಲಗೆರೆಯ ಮೂಲಕವೇ ಬಂದಿದ್ದೇನೆ. ಮದ್ದೂರಿನಿಂದ ಮಂಡ್ಯ ಕಡೆಗೆ ಬರುವಾಗ ಗೆಜ್ಜಲಗೆರೆಗಿಂತ ಸ್ವಲ್ಪ ಮೊದಲು ಸದರಿ ಹೆದ್ದಾರಿ "S" ಆಕಾರದಲ್ಲಿ ತಿರುವು ಇದೆ ಎಂದರೆ ಸಾಕ್ಷಿ ಸ್ವಲ್ಪ ತಿರುವು ಇದೆ ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಭೇಟಿ ನೀಡಿದಾಗ ಪುರುಷೋತ್ತಮ್ ಸ್ಥಳ ತೋರಿಸಿದರು ಎಂದು ತೋರಿಸಲು ಅವರ ಸಹಿಯನ್ನು ನಕ್ಷೆಗೆ ಪಡೆದಿಲ್ಲ. ಬೇರೆ ಯಾವುದೇ ದಾಖಲೆಗೆ ಅವರ ಸಹಿ ಪಡೆದಿಲ್ಲ. ನಾನು ಕೃತ್ಯ ಸ್ಥಳಕ್ಕೆ ಹೋಗಿ ಪರಿಶೀಲಿಸಿ, ಯಾವುದೇ ನಕ್ಷೆ ತಯಾರಿಸಿಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.